# Dr. B.B. Hegde First Grade College, Kundapura

## DEPARTMENT OF KANNADA

## Record of GD Conducted by Students

**Class & Section: II B.B.A.**

**Date of Conduction:16-05-2024**

| SL. No. | Group I | | | Group II | | |
|---|---|---|---|---|---|---|
| | Name of students | Roll No. | Signature | Name of students | Roll No. | Signature |
| 01. | Shraddha R | BBA22034 | [signature] | Silviya | BBA22035 | Silviya. |
| 02. | Suhani | BBA22041 | [signature] | Preethi C. | BBA22030 | Preethi |
| 03. | Amulya | BBA22006 | [signature] | Shraddha | BBA22033 | [signature] |
| 04. | Anisha | BBA22007 | [signature] | Soumya | BBA22039 | [signature] |
| 05. | Soumya | BBA22038 | [signature] | Aishwarya | BBA22002 | [signature] |

**Topic:ಹಳೆಗನ್ನಡ ಸಾಹಿತ್ಯ ಮತ್ತು ಹೊಸಗನ್ನಡ ಸಾಹಿತ್ಯ**

**Essence of the Discussion:**

**Group I:** ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೇ ಶತಮಾನದಿಂದ ಸುಮಾರು ಹನ್ನೆರಡನೇ ಶತಮಾನದ ವರೆಗಿನ ಕಾಲಘಟ್ಟವನ್ನು ಹಳೆಗನ್ನಡ ಎಂದು ಗುರುತಿಸಬಹುದು. ಈ ಕಾಲದ ಸಾಹಿತ್ಯ ಮುಖ್ಯವಾಗಿ ಜೈನ ಧರ್ಮವನ್ನು ಅವಲಂಬಿಸಿದೆ. ಕನ್ನಡ ಚರಿತ್ರೆಯ ಈ ಘಟ್ಟಕ್ಕೆ ಆದಿ-ಕಾವ್ಯ ಎಂದೂ ಸಹ ಕರೆಯಬಹುದು. ಈ ಕಾಲದ ಅತಿ ಪ್ರಸಿದ್ಧ ಕವಿಯೆಂದರೆ ಪಂಪ ಪಂಪನ ವಿಕ್ರಮಾರ್ಜುನ ವಿಜಯ ಅಥವಾ ಪಂಪ ಭಾರತ ಇಂದಿಗೂ ಮೇರು ಕೃತಿಯೆಂದು ಪರಿಗಣಿತವಾಗಿದೆ. ಪಂಪ ಭಾರತ ಮತ್ತು ತನ್ನ ಇನ್ನೊಂದು ಮುಖ್ಯ ಕೃತಿಯಾದ ಆದಿಪುರಾಣದ ಮೂಲಕ ಪಂಪ ಕನ್ನಡ ಕಾವ್ಯಪರಂಪರೆಯ ದಿಗ್ಗಜರಲ್ಲಿ ಒಬ್ಬನಾಗಿದ್ದಾನೆ. ಪಂಪ ಭಾರತ ಸಂಸ್ಕೃತ ಮಹಾಭಾರತದ ಕನ್ನಡ ರೂಪಾಂತರ. ತನ್ನ ಮಾನವತಾವಾದ ಹಾಗೂ ಗಂಭೀರ ಲೇಖನಶೈಲಿಯ ಮೂಲಕ ಕನ್ನಡದ ಅತ್ಯಂತ ಪ್ರಭಾವಶಾಲಿ ಲೇಖಕರಲ್ಲಿ ಒಬ್ಬನಾಗಿದ್ದಾನೆ.' ಮಾನವ ಕುಲ ತಾನೊಂದೇ ವಲಂ' ಎಂದು ವಿಶ್ವಮಾನವ ತತ್ವವನ್ನು ಸಾರಿದ ಜಗದ ಕವಿ ಪಂಪ.ಇದೇ ಕಾಲದ ಇನ್ನೊಬ್ಬ ಪ್ರಮುಖ ಲೇಖಕನೆಂದರೆ ಶಾಂತಿನಾಥ ಪುರಾಣವನ್ನು ರಚಿಸಿದ ಪೊನ್ನ. ಈ ಕಾಲದ ಮತ್ತೊಬ್ಬ ಹೆಸರಾಂತ ಕವಿ ರನ್ನ . ರನ್ನನ ಪ್ರಮುಖ ಕೃತಿಗಳು ಜೈನ ಧರ್ಮೀಯವಾದ ಅಜಿತ ತೀರ್ಥಂಕರ ಪುರಾಣ ಮತ್ತು ಗದಾಯುದ್ಧಂ ಅಥವಾ ಸಾಹಸಭೀಮ ವಿಜಯ.ಇದು ಇಡೀ ಮಹಾಭಾರತದ ಒಂದು ಸಿಂಹಾವಲೋಕನ ದೃಷ್ಟಿ. ಮಹಾಭಾರತ ಯುದ್ಧದ ಕೊನೆಯ ದಿನದಲ್ಲಿ ಸ್ಥಿತವಾಗಿದ್ದರೂ ಸಿಂಹಾವಲೋಕನ ಕ್ರಮದಲ್ಲಿ ಇಡಿಯ ಮಹಾಭಾರತವನ್ನು ಪರಿಶೀಲಿಸುತ್ತದೆ. ಛಂದಸ್ಸಿನ ದೃಷ್ಟಿಯಿಂದ ಈ ಕಾಲದ ಕಾವ್ಯ ಚಂಪೂ ಶೈಲಿಯಲ್ಲಿದೆ.

- **Group II:**ಈ ಶತಮಾನದಲ್ಲಿ ಕನ್ನಡ ಸಾಹಿತ್ಯ ವೈವಿಧ್ಯಮಯವಾಗಿ, ಸಮೃದ್ಧವಾಗಿ ಬೆಳೆದಿದೆಕನ್ನಡ . ಚರಿತ್ರೆಯಲ್ಲಿ ಯಾವ ಒಂದು ಶತಮಾನದಲ್ಲೂ ಈ ಬಗೆಯ ವೈವಿಧ್ಯಮಯ ಸೃಷ್ಟಿಯನ್ನು ಸಾಹಿತ್ಯದ, ಇಷ್ಟೊಂದು ಎತ್ತರದ ಪ್ರತಿಭೆಗಳನ್ನು ಕಾಣುವುದಿಲ್ಲಅಷ್ಟೊಂದು ವಿಸ್ತಾರ „ ವೈವಿಧ್ಯ, ಆಧುನಿಕ ಕನ್ನಡ ಸಾಹಿತ್ಯದುದ್ದೇಶಗಿರಿರಾಯರು ಈ .ಇದನ್ನು ಸಮಗ್ರವಾಗಿ ಹಿಡಿದಿಡುವುದು ಅಸಾಮಾನ್ಯ ಸಾಹಸದ ಕೆಲಸವೇ ಸರಿ .

ಹೊಸಗನ್ನಡ ಸಾಹಿತ್ಯದ ಇತಿಹಾಸವನ್ನು ಅದರ ಚಾರಿತ್ರಿಕ ಸವಾಲನ್ನು ಒಪ್ಪಿಕೊಂಡು, ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ಸಮರ್ಥವಾಗಿ ದಾಖಲಿಸಿದ್ದಾರೆ".ನವೋದಯ ಎಂದರೆ **ಹೊಸ ಹುಟ್ಟು/ಹೊಸದು**. ಬ್ರಿಟಿಷ್ ಆಳ್ವಿಕೆಯ ಪ್ರಾರಂಭಿಕ ಹಂತಗಳಲ್ಲಿ ಹೆಚ್ಚು ಬೆಳಕು ಕಾಣದೆ ಇದ್ದ ಕನ್ನಡ ಸಾಹಿತ್ಯ, ೧೯ನೇ ಶತಮಾನದ ಕೊನೆಗೆ ಹಾಗು ಇಪ್ಪತ್ತನೆ ಶತಮಾನದ ಆರಂಭದಲ್ಲಿ ಹೊಸ ಹುಟ್ಟು ಪಡೆಯಿತು. ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆಗೆ ಕಾರಣವಾಯಿತು. ಈ ಹಂತದಲ್ಲಿ ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಶಿವರಾಮ ಕಾರಂತ ಮೊದಲಾದ ಶ್ರೇಷ್ಠ ಲೇಖಕರು ಬೆಳಕಿಗೆ ಬಂದರು.

**Conclusion:** ಈ ಕಾಲದ ಸಾಹಿತ್ಯ ಪ್ರಕಾರಗಳು ರೊಮ್ಯಾಂಟಿಕ್ ಇಂಗ್ಲಿಷ್ ಕಾವ್ಯ ಮತ್ತು ಗ್ರೀಕ್ ರುದ್ರನಾಟಕಗಳಿಂದ ಪ್ರಭಾವಿತವಾಯಿತು. ಈ ಘಟ್ಟದ ಬೆಳವಣಿಗೆಯನ್ನು ತಂದವರು ಬಿ.ಎಂ.ಶ್ರೀ, ತಮ್ಮ **ಇಂಗ್ಲಿಷ್ ಗೀತಗಳ** ಪುಸ್ತಕ ದೊಂದಿಗೆ. ಅನೇಕ ಸುಶಿಕ್ಷಿತ ಕನ್ನಡಿಗರು, ಮುಖ್ಯವಾಗಿ ಶಿಕ್ಷಕ ವೃತ್ತಿಯಲ್ಲಿದ್ದವರು, ತಮ್ಮ ಮಾತೃಭಾಷೆಯಲ್ಲಿ ಬರೆಯುವುದರ ಮಹತ್ವವನ್ನು ಕಂಡು ಕೊಂಡು ಕನ್ನಡ ಸಾಹಿತ್ಯಕ್ಕೆ ಪ್ರೇರಣೆಯನ್ನೊದಗಿಸಿದರು.ಇದಕ್ಕೆ ಉದಾಹರಣೆಯಾಗಿ ಕುವೆಂಪು - ತಮ್ಮ ಒಬ್ಬ ಶಿಕ್ಷಕರಿಂದ (ಬ್ರಿಟಿಷ್ ಮೂಲದವರು) ಕನ್ನಡದಲ್ಲಿ ಬರೆಯುವುದರ ಮಹತ್ವವನ್ನು ಕಂಡುಕೊಂಡು ಮುಂದೆ **ರಾಷ್ಟ್ರಕವಿ** ಬಿರುದಿಗೆ ಪಾತ್ರರಾದರು. ಅವರ ಪ್ರಕೃತಿಪ್ರೇಮ, ಮಾನವನ ಉನ್ನತಿಯಲ್ಲಿ ನಂಬಿಕೆ ಮತ್ತು ಪ್ರಕೃತಿ ಮತ್ತು ದೇವರ ಸಮ್ಮಿಶ್ರಣವನ್ನು ಕಾಣುವ ಅವರ ಮನಸ್ಸು ಅವರನ್ನು ಕನ್ನಡದ ಉಚ್ಚ ಕವಿಗಳಲ್ಲಿ ಒಬ್ಬರನ್ನಾಗಿ ಮಾಡಿವೆ. ಅವರ ಅತಿ ಪ್ರಸಿದ್ಧ ಕಾವ್ಯಕೃತಿ **ಶ್ರೀ ರಾಮಾಯಣ ದರ್ಶನಂ**. ಇದಕ್ಕೆ ಉದಾಹರಣೆಯಾಗಿ ನಿಂತಿರುವ ಮತ್ತೊಬ್ಬ ಲೇಖಕರೆಂದರೆ ಶಿವರಾಮ ಕಾರಂತ – ಅತ್ಯಂತ ಬುದ್ಧಿಮತ್ತೆಯ, ಆಳವಾದ ಆದರ್ಶಗಳುಳ್ಳ ವ್ಯಕ್ತಿತ್ವ, ಹಾಗೂ ಅಷ್ಟೇ ಆಳವಾದ ಸಾಮಾಜಿಕ ಕಳಕಳಿಯಿದ್ದ ಲೇಖಕರು. ಅವರ ಶಕ್ತಿಶಾಲಿ ಸಾಮಾಜಿಕ ಕಾದಂಬರಿಗಳಲ್ಲಿ ಪ್ರಸಿದ್ಧವಾದವು-ಚೋಮನ ದುಡಿ, ಬೆಟ್ಟದ ಜೀವ, ಮೈಮನಗಳ ಸುಳಿಯಲ್ಲಿ, **ಮರಳಿ ಮಣ್ಣಿಗೆ** ಮತ್ತು **ಮೂಕಜ್ಜಿಯ ಕನಸುಗಳು** ಮೊದಲಾದುವು.




SIGNATURE OF FACULTY

SIGNATURE OF H.O.D

H.O.D. of Kannada
Dr. B. B. Hegde First Grade College
Kundapura - 576201

# Dr. B.B. Hegde First Grade College, Kundapura

## DEPARTMENT OF KANNADA

## Record of GD Conducted by Students

**Class & Section: I B.Com 'B'**

**Date of Conduction:08–05-2024**

| SL. No. | Group I | | | Group II | | |
|---|---|---|---|---|---|---|
| | Name of students | Roll No. | Signature | Name of students | Roll No. | Signature |
| 01. | Sanmitha Shetty | BCM23133 | [signature] | Prathvi | BCM23117 | Prathvi |
| 02. | Ashitha Achar | BCM23087 | [signature] | Deeksha | BCM23092 | Deeksha |
| 03. | Rashmitha | BCM23124 | Rashmitha | Monica | BCM23104 | Monica |
| 04. | Rashmitha | BCM23125 | Rashmitha | Ashwini | BCM23088 | [signature] |
| 05. | Shreya Kharvi | BCM23138 | [signature] | Pallavi | BCM23111 | Pallavi |


**Topic:** ಜನಪದ ಸಾಹಿತ್ಯ / ಶಿಷ್ಟ ಸಾಹಿತ್ಯ

**Essence of the Discussion:**

**Group I:**ಜನಪದ ಸಾಹಿತ್ಯ: ಜನಪದ ಸಾಹಿತ್ಯದ ಇತಿಹಾಸ ದೀರ್ಘವಾದದ್ದು ಜನಪದ ಸಾಹಿತ್ಯದಲ್ಲಿ ಅಕ್ಷರಸ್ಥರಲ್ಲದೆಯೂ ಮೌಲ್ಯಗಳಿಗೆ ಪ್ರಾಮುಖ್ಯ ದೀರ್ಘ ಮಹಾಕಾವ್ಯಗಳು ಜನಪದ ಸಾಹಿತ್ಯದಲ್ಲಿಯೇ ಹೆಚ್ಚು ದೊರೆಯುತ್ತವೆ. ಜನಪದ ಸಾಹಿತ್ಯವು ಶಿಷ್ಟ ಸಾಹಿತ್ಯದ ಹುಟ್ಟಿಗೆ ಕಾರಣವಾಯಿತು.

**Group II:** ಶಿಷ್ಟ ಸಾಹಿತ್ಯ : ಶಿಷ್ಟ ಸಾಹಿತ್ಯವು ಜನಪದ ಸಾಹಿತ್ಯಕ್ಕಿಂತ ಹೆಚ್ಚಿನ ಮಹತ್ವ ಪಡೆದಿದೆ ಸಾಹಿತ್ಯದ ಹಲವು ಪ್ರಕಾರಗಳನ್ನು ಶಿಷ್ಟ ಸಾಹಿತ್ಯ ಪರಿಚಯಿಸಿತು. ಹಲವಾರು ಸಾಹಿಗಳು ಹುಟ್ಟಿಕೊಂಡರು ಮತ್ತು ಹಲವು ಸಾಹಿತ್ಯ ಕೃತಿಗಳು ಪ್ರಕಟಗೊಂಡವು ಲಿಖಿತ ರೂಪದಲ್ಲಿರುವುದರಿಂದ ದೀರ್ಘಕಾಲ ಬಾಳಿಕೆ ಬರುವುದರೊಂದಿಗೆ ಮುಂದಿನ ಪೀಳಿಗೆಗೆ ಅವುಗಳನ್ನ ಯಥಾಸ್ಥಿತಿಯಲ್ಲಿ ನೀಡಲು ಸಾಧ್ಯವಾಯಿತು

**Conclusion:** ಸಾಹಿತ್ಯವು ಚಲನಶೀಲವಾಗಿದ್ದು ನಿತ್ಯನಿರಂತರವಾಗಿ ಹರಿಯುತ್ತಿರುತ್ತದೆ. ಇದು ಸಂಸ್ಕೃತಿಯ ವಾಹಕವಾಗಿದ್ದು ಕಲೆ, ಸಂಸ್ಕೃತಿ, ನಾಡು ನುಡಿಯ ಬಗೆಗೆ ಅಭಿಮಾನ ಮೂಡಿಸುತ್ತದೆ. ಜನಪದ ಸಾಹಿತ್ಯವು ಶಿಷ್ಟ ಸಾಹಿತ್ಯಕ್ಕೆ ಬೇರಾಗಿದ್ದು ಶಿಷ್ಟಸಾಹಿತ್ಯ ಹೆಮ್ಮರವಾಗಿ ಬೆಳೆಯಲು ಇದು ಸಹಾಯ ಮಾಡಿದೆ. ಹೀಗಾಗಿ ಕನ್ನಡದಲ್ಲಿನ ಜನಪದ ಸಾಹಿತ್ಯದ ಮುಂದಿನ ತಲೆಮಾರಾಗಿ ಬೆಳೆದ ಶಿಷ್ಟ ಸಾಹಿತ್ಯವು ಅತ್ಯುತ್ತಮವಾಗಿ ಸಾಹಿತ್ಯದ ವಿವಿಧ ಮಜಲುಗಳನ್ನು ಪರಿಚಯಿಸುವ ಕಾರ್ಯವನ್ನ ಮಾಡುತ್ತದೆ.




SIGNATURE OF FACULTY

SIGNATURE OF H.O.D

H.O.D. of Kannada
Dr. B. B. Hegde First Grade College
Kundapura - 576201

# Dr. B. B. Hegde First Grade College, Kundapura
## DEPARTMENT OF KANNADA
## Record of GD Conducted by Students

**Class & Section: II B.C.A 'A'**
**Date of Conduction: 12-10-2023**

| SL. No. | Group I | | | Group II | | |
|---|---|---|---|---|---|---|
| | **Name of students** | **Roll No.** | **Signature** | **Name of students** | **Roll No.** | **Signature** |
| 01. | Akash | BCA22005 | Akash | Nikitha P | BCA22027 | Nikita P |
| 02. | Chiray | BCA22013 | Chirag | Rakshitha N | BCA22038 | [illegible] |
| 03 | Madan Kumar | BCA22022 | [illegible] | Shruthi | BCA22059 | [illegible] |

**Topic:** ಕನ್ನಡ ಕಲಿಕೆ ಕಡ್ಡಾಯವೇ?

**Essence of the Discussion:**


**Group I:** ಇತ್ತಿಚಿನ ದಿನಮಾನಗಳಲ್ಲಿ ದಿನೇ ದಿನೇ ಬೆಂಗಳೂರು ಮಹಾನಗರ ಒಳಗೊಂಡಂತೆ ಅನೇಕ ಕರ್ನಾಟಕದ ಮಹಾನಗರಗಳಲ್ಲಿ, ಪರ ರಾಜ್ಯಗಳಿಂದ ಪರದೇಶಗಳಿಂದ ಒಲಸೆ ಬಂದವರಿಂದ ದಿನೇ ದಿನೇ ಕನ್ನಡ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿರುವುದು ಖೇದಕರ. ಆ ನಿಟ್ಟಿನಲ್ಲಿ ಸರ್ಕಾರ ಹಾಗೂ ಕನ್ನಡ ಪರ ಸಂಘಟನೆಗಳು ಕಡ್ಡಾಯ ಕನ್ನಡಕ್ಕಾಗಿ ಆಂದೋಲನಕ್ಕೆ ಚಾಲನೆ ನೀಡುವುದು ಹೆಚ್ಚು ಸೂಕ್ತ.

**Group II:** ಕರ್ನಾಟಕದಲ್ಲಿ ಕನ್ನಡ ಕಡ್ಡಾಯ ಮಾಡುವುದರಿಂದ ಅನ್ಯ ದೇಶದ, ಅನ್ಯ ರಾಜ್ಯದ ಪ್ರತಿಭಾವಂತ ಕೌಶಲ್ಯ ಹೊಂದಿರುವ ಕಾರ್ಮಿಕರಾಗಲಿ, ಉದ್ಯಮಿಗಳಾಗಲಿ, ಟೆಕ್ಕಿಗಳಾಗಲಿ ಬಂದು

ಉದ್ಯಮವನ್ನು ನಡೆಸಲು ತೊಡಕಾಗಿರುವುದರಿಂದ ಕಡ್ಡಾಯ ಕನ್ನಡ ಅಷ್ಟೋಂದು ಸೂಕ್ತವಲ್ಲ ಎನ್ನುವುದು ಇವರ ನಿಲುವಾಗಿದೆ.

## Conclusion:

ಕರ್ನಾಟಕದಲ್ಲಿ ಕಡ್ಡಾಯ ಕನ್ನಡ ಅನಿವಾರ್ಯ ಕಲಿಕೆ ಅನಿವಾರ್ಯವೂ ಹೌದು, ಅದರ ಜೊತೆ ಜೊತೆಗೆ ದೇಶದ ಅನ್ಯರಾಜ್ಯ, ವಿದೇಶದ ನಾಗರಿಕರಲ್ಲಿ ಕನ್ನಡ ಭಾಷೆಯ ಬಗ್ಗೆ ಜಾಗ್ರತಗೊಳಿಸುದರ ಜೊತೆಗೆ ಎಲ್ಲರನ್ನು ವಿಸ್ವಾಸಕ್ಕೆ ತೆಗೆದುಕೊಳ್ಳುವುದು ಹೆಚ್ಚು ಸೂಕ್ತ.




SIGNATURE OF FACULTY

SIGNATURE OF H.O.D

H.O.D. of Kannada
Dr. B. B. Hegde First Grade College
Kundapura - 576201